ಕರ್ನಾಟಕ ಸರ್ಕಾರ
ಪದವಿ ಪೂರ್ವ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂ:ರಾಸೇಯೋ/ಪಪೂಶಿಇ/ಡಿಜಿಟಲ್‌ಪೆ/01/2016-17 ದಿ:05.01.2017

ಜ್ಞಾಪನ :

ವಿಷಯ: DIGITAL PAYMENTS ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ: ಎನ್.ಎಸ್.ಎಸ್. ಪ್ರಾಂತೀಯ ಕೇಂದ್ರ ಭಾರತ ಸರ್ಕಾರ ಇವರ ಪತ್ರ ಸಂಖ್ಯೆ No.22/NSS/NYD/A/2016-17/1091-1125 Dt: 30-12-2016

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಎನ್.ಎಸ್.ಎಸ್. ಪ್ರಾಂತೀಯ ಕೇಂದ್ರ ಭಾರತ ಸರ್ಕಾರ ಬೆಂಗಳೂರು ರವರ ಆದೇಶದ ಪತ್ರದನ್ವಯ DIGITAL PAYMENTS ಚಟುವಟಿಕೆಗಳನ್ನು ದಿನಾಂಕ: 12.01.2016 ರಂದು ಹಮ್ಮಿಕೊಳ್ಳಲು ಸೂಚಿಸಿದ್ದು, ಅದರಂತೆ ಸದರಿ ದಿನ ರಾಷ್ಟ್ರೀಯ ಯುವ ದಿನಾಚರಣೆಯನ್ನು ಎಲ್ಲಾ ಕಾಲೇಜುಗಳಲ್ಲಿ ಹಮ್ಮಿಕೊಂಡು ಈ ಕೆಳಕಂಡ ಚಟುವಟಿಕೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಪ್ರಾಂಶುಪಾಲರು ಮತ್ತು ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಲ್ಲಿ ಈ ಮೂಲಕ ಕೋರಿದೆ.

1. ಡಿಜಿಟಲ್ ಪೇಮೆಂಟ್ಸ್ ಬಗ್ಗೆ ಅರಿವಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕನಿಷ್ಠ 10 ಜನರಿಗೆ ಡಿಜಿಟಲ್ ಪೇಮೆಂಟ್ಸ್ ಬಗ್ಗೆ ಅರಿವನ್ನು ಮೂಡಿಸುವುದು.
2. ಡಿಜಿಟಲ್ ಪೇಮೆಂಟ್ಸ್ ಬಗ್ಗೆ ಅರಿವಿಲ್ಲದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕನಿಷ್ಟ ಒಂದು ವಿಧದ ಡಿಜಿಟಲ್ ಪೇಮೆಂಟ್ ಬಗ್ಗೆ ಅರಿತುಕೊಳ್ಳುವುದು.

ಈ ಮೇಲ್ಕಂಡ ಚಟುವಟಿಕೆಗಳನ್ನು ಕಡ್ಡಾಯವಾಗಿ ಹಮ್ಮಿಕೊಂಡು ದಿನಾಂಕ:15.01.2016 ರೊಳಗಾಗಿ ಎನ್.ಎಸ್.ಎಸ್ ವಿಭಾಗ, ಕೇಂದ್ರಕಛೇರಿ, ಪ.ಪೂ.ಶಿ.ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿಗೆ ವರದಿಗಳನ್ನು ನೀಡುವುದು ಅಥವಾ ಇ-ಮೇಲ್ ಮಾಡಲು ಕೋರಿದೆ.

(ಸೂಚನೆ : ಹೆಚ್ಚು ಜನರಿಗೆ ಅರಿವು ಮೂಡಿಸುವ ವಿದ್ಯಾರ್ಥಿಗಳ ವಿವರಗಳನ್ನು ಆಯ್ಕೆ ಮಾಡಿ ಕಳುಹಿಸುವುದು. ಅತಿಹೆಚ್ಚು ಜನರಿಗೆ ಅರಿವು ಮೂಡಿಸಿರುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ವಿಶೇಷವಾದ ಪ್ರೋತ್ಸಾಹ ಪ್ರಶಸ್ತಿಗಳನ್ನು ನೀಡಲಾಗುವುದು.)

ತಮ್ಮ ವಿಶ್ವಾಸಿ

Cyath Reddy GR

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿ:

1. ಸಹಾಯಕ ನಿರ್ದೇಶಕರು ಇ-ಆಡಳಿತ, ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
2. ಕಛೇರಿ ಪ್ರತಿ